# ಜೀವಾಧಿಪತಿ ಶಿಲುಬೆಗೇರಿಕಸಲ್ಪಟ್ಟರು

ಮತ್ತಾಯ 27:33-50

ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು,

ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು

ಯೆಶಾಯ 53:5

ಯೇಸು ಸೆರೆಹಿಡಿಯಲ್ಪಟ್ಟ ಸ್ವಲ್ಪ ಸಮಯದಲ್ಲಿಯೇ ಅವರ ವಿಚಾರಣೆಯು ಪ್ರಾರಂಭವಾಯಿತು. ಧರ್ಮಶಾಸ್ತ್ರದ ಪ್ರಕಾರ ಮರಣದ ತೀರ್ಪು ಬೆಳಗಿನ ಜಾವದಲ್ಲಿಯೇ ಕೊಡಲ್ಪಡಬೇಕು ಎಂದು ಇರುವುದರಿಂದ ಬೆಳಗಾಗುತ್ತಲೇ ನ್ಯಾಯಸಭೆಯ ಸಧಸ್ಯರು ತಮ್ಮ ಕರ್ತವ್ಯಕ್ಕಾಗಿ ಸಭೆಸೇರಿ ಹಿಂದಿನ ರಾತ್ರಿ ಪ್ರಧಾನ ಯಾಜಕರಿಂದ ಕೊಡಲ್ಪಟ್ಟ ತೀರ್ಪನ್ನು ಖಚಿತಪಡಿಸಿಕೊಂಡರು. ಅಂದರೆ, ಸೃಷ್ಟಿಸಿದಾತನು ಹಲವು ಕಾಲಗಳಿಂದ ಮಾಡಲಾದ ವಾಗ್ದಾನ ಯೋಜನೆಯಂತೆ, ಯೇಸು ತಾನು ಲೋಕಕ್ಕೆ ಬಂದುದಾಗಿಯೂ, ತಾನು ಲೋಕವನ್ನೂ, ಇಸ್ರಯೇಲರನ್ನೂ, ಮರಣಧಂಡನೆಯಿಂದ ವಿಮೋಚನೆ ಮಾಡುವದಾಗಿಯೂ, ಅನಂತರ ದೇವರ ತಕ್ಕ ಸಮಯದಲ್ಲಿ ಎಲ್ಲಾ ಭೂ ನಿವಾಸಿಗಳ ಮತ್ತು ಇಸ್ರಯೇಲರ ಆಶೀರ್ವಾದಕ್ಕಾಗಿ ತಾವು ಅಭಿಷಕ್ತನ ರಾಜ್ಯವನ್ನು ಸ್ಥಾಪಿಸುವುದಾಗಿಯೂ ತಿಳಿಸಿದ್ದರಿಂದ ಯೇಸು ಸೃಷ್ಟಿಸಿದಾತನ ವಿರುದ್ಧವಾಗಿ ಧೂಷಣೆ ಮಾಡಿದ್ದಾರೆಂದು ಪ್ರಧಾನ ಯಾಜಕರಿಂದ ಕೊಡಲ್ಪಟ್ಟ ತೀರ್ಪನ್ನು ನ್ಯಾಯಸಭೆಯವರು ಖಚಿತಪಡಿಸಿದರು. ಯೇಸು ಐದು ದಿನಗಳ ಹಿಂದೆ ಕತ್ತೆಯ ಮೇಲೆ ಕುಳಿತು ಬರುವಾಗ "ಹೋಸನ್ನಾ ದಾವೀದನ ಕುಮಾರನಿಗೆ ಹೋಸನ್ನಾ" ಎಂದು ಅಬ್ಬರಿಸಿದ ಜನರು ಇದಾದ ಮೇಲೆ ಯೇಸುವನ್ನು ರಾಜನೆಂದು ಪ್ರಕಟಿಸಲು/ನಿಯಮಿಸಲು ಪ್ರಯಾಸಪಡುವದಕ್ಕೆ ಮುಂಚೆ ಇದೆಲ್ಲವನ್ನೂ ಕೊನೆಗಾಣಿಸುವ ಉದ್ಧೇಶದಿಂದ ಯಾಜಕರು ಮತ್ತು ಸಭೆಯವರು ವೇಗವಾಗಿ ಕಾರ್ಯನಿರ್ವಹಿಸಿದರು. ಪಾಸ್ಕದ ವಾರದಲ್ಲಿ ಯಾವ ಮರಣಧಂಡನೆಯನ್ನೂ ನೆರವೇರಿಸಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ಯೇಸು ಆ ಪಾಸ್ಕ ವಾರದ ಅಂತ್ಯದವರೆಗೂ ಕೊಲ್ಲಲ್ಪಡದಿದ್ದರೆ, ಇನ್ನೂ ಬಂಧಿತರಾಗಿಯೇ ಇಡಲ್ಪಟ್ಟರೆ ಮುಂದೆ ಯೇಸುವಿಗೋ ಅಥವಾ ತಮಗೋ ಏನು ಸಂಭವಿಸುತ್ತದೆ ಎಂದು ತಿಳಿದುಕೊಳ್ಳಲಾಗದ ಸ್ಥಿತಿಯಲ್ಲಿ ಕಾಣಲ್ಪಟ್ಟರು. ಆದ್ದರಿಂದ ಅವರು ತಾವು ಸಂಚುಮಾಡಿದ್ದನ್ನು ನೆರವೇರಿಸುವುದಕ್ಕೆ ಸ್ವಲ್ಪಸಮಯವನ್ನು ಮಾತ್ರ ಹೊಂದಿದ್ದರು. ಇದಲ್ಲದೆ ತಮ್ಮ ಈ ಸಂಚಿನ ಮೂಲಕ ಅವರಿಗೆ ದುಷ್ಟನಂತೆ ಕಾಣಲ್ಪಡುವವರೂ ಮತ್ತು ತಮಗೂ ರೋಮ್ ಸಾಮ್ರಾಜ್ಯಕ್ಕೂ ನಡುವೆ ಗೊಂದಲ ಸೃಷ್ಟಿಯಾಗಲು ಕಾರಣರಾದ ಆ ಯೇಸುವನ್ನು ತಮ್ಮ ದೇಶದೊಳಗಿಂದ ನಿರ್ಮೂಲ ಮಾಡಿಬಿಡಬಹುದೆಂದು ನಂಬಿದರು.

ಸಭೆಯವರು ತಮ್ಮ ಮತ ಸಂಬಂಧವಾದ ವಿಷಯಗಳಲ್ಲಿ ಜನರನ್ನು ನ್ಯಾಯತೀರಿಸಲು ಅಧಿಕಾರವನ್ನು ಹೊಂದಿದ್ದರೂ ಸಹಾ ಮರಣಧಂಡನೆಯನ್ನು ವಿಧಿಸಲು ನಿಷೇಧಿಸಲ್ಪಟ್ಟಿದ್ದರು. ಆದ್ದರಿಂದಲೇ ಯೇಸುವನ್ನು ಸಭೆಯವರ ಮುಂದೆ ಅಪರಾಧಿ ಎಂದು ನಿರೂಪಿಸಿದ ನಂತರ, ಅವರನ್ನು ರೋಮ್ ದೇಶಾಧಿಪತಿಯಾದ ಪಿಲಾತನಮುಂದೆ ನಿಲ್ಲಿಸುವುದು ಅನಿವಾರ್ಯವಾಗಿತ್ತು. ಮರಣಧಂಡನೆಯನ್ನು ವಿಧಿಸಲು ಪಿಲಾತನು ದೇವದೂಷಣೆಯೆಂಬ ಅಪರಾಧವನ್ನು ಒಂದು ವಿಷಯವಾಗಿಯೇ ಪರಿಗಣಿಸುವದಿಲ್ಲವೆಂದು ಅರಿತಿದ್ದ ಅವರು, ಪಿಲಾತನ ಮುಂದೆ ಸಂಪೂರ್ಣ ವಿಭಿನ್ನವಾದ ಅಪರಾಧಗಳನ್ನು ಯೇಸುವಿಗೆ

ವಿರುದ್ಧವಾಗಿ ಇಟ್ಟರು. ಅಂದರೆ ಯೇಸು ಒಬ್ಬ ಗಲಭೆವಾದಿಯೆಂತಲೂ, ಕಲಹಗಳನ್ನು ಉಂಟುಮಾಡುವವನೆಂತಲೂ, ತನ್ನನ್ನು ರಾಜನೆಂದು ಪ್ರಕಟಿಸಿದ್ದಾರೆಂತಲೂ, ಯೇಸುವನ್ನು ಸ್ವಾತಂತ್ರವಾಗಿ ಬಿಡುವದು ರೋಮ್ ಸಾಮ್ರಾಜ್ಯದ ಒಳಿತಿಗೆ ಕೇಡು ಉಂಟುಮಾಡುವಂತದ್ದಾಗಿ ಇರುವವು ಎಂಬ ಅಪರಾಧಗಳನ್ನು ಮುಂದಿಟ್ಟರು. ಇವರು ಮುಂದಿಟ್ಟ ಈ ಅಪರಾಧಗಳಲ್ಲಿ ಕಪಟತನವೂ, ಮೂರ್ಖತನವೂ ಬಟ್ಟಬಯಲಾಗಿ ಕಾಣಲ್ಪಟ್ಟದ್ದರಿಂದ, ಈ ಅಪರಾಧಗಳನ್ನು ನಿರೂಪಿಸಲು ಅವಶ್ಯಕತೆ ಇಲ್ಲದಂತಾಯಿತು. ಹೊಟ್ಟೆಕಿಚ್ಚಿನ ಕಾರಣದಿಂದಲೇ ಅವರು ಯೇಸುವನ್ನು ತನ್ನ ಬಳಿ ಒಪ್ಪಿಸಿದ್ದಾರೆಂದು ಪಿಲಾತನು ಅರಿತುಕೊಂಡನು. ಏಕೆಂದರೆ ಪ್ರಧಾನಯಾಜಕರಿಗೆ ಮತ್ತು ಧರ್ಮಶಾಸ್ತ್ರಿಗಳಿಗೆ ಸಾಮಾನ್ಯ ಜನರ ಮಧ್ಯೆ ಇದ್ದ ಪ್ರಭಾವಕ್ಕಿಂತಲೂ ಯೇಸುವಿಗೆ ಮತ್ತು ಅವರ ಬೋಧನೆಗಳಿಗೆ ಅಧಿಕ ಪ್ರಭಾವವಿತ್ತು ಎಂಬುದನ್ನು ಪಿಲಾತನು ಅರಿತಿದ್ದನು. ಯೇಸುವಿನ ಊರು ಗಲಿಲೇಯವಾಗಿದ್ದದರಿಂದ ಯೇಸುವಿನ ಪ್ರಕರಣವನ್ನು ವಿಚಾರಿಸುವುದನ್ನು ಕೈಬಿಡಲು ತೀರ್ಮಾನಿಸಿದ ಪಿಲಾತನು, ಯೇಸುವಿನ ಪ್ರಕರಣವು ಗಲಿಲೇಯ ದೇಶಾಧಿಪತಿಯಾದ ಹೆರೋದರಸನಿಗೆ ಸೇರಿದ್ದು ಎಂದು ಪ್ರಕಟಿಸಿ ಯೇಸುವಿನ ಪ್ರಕರಣವನ್ನು ವಿಚಾರಿಸುವ ಕರ್ತವ್ಯದಿಂದ ವಿಮುಖನಾದನು.

## ಹೆರೋದರಸನ ಮುಂದೆ ಯೇಸು

ಹೀಗೆ ಯೇಸುವನ್ನು ಹೆರೋದನಿಗೆ ಒಪ್ಪಿಸಿದ ಕಾರ್ಯವು ಅವರು ಊಹಿಸಲಾಗದಂತ ತೊಂದರೆಯಾಗಿ ಪರಿಣಮಿಸಿತು. ಆದರೆ ಹೆರೋದನ ಅರಮನೆಯು ಅಷ್ಟೇನೂ ದೂರವಾಗಿರಲಿಲ್ಲ. ಹೆರೋದನು ಯೇಸುವಿನ ಅಧ್ಭುತಗಳನ್ನು ಕುರಿತು ಅನೇಕ ವಿಷಯಗಳನ್ನು ಕೇಳಿದ್ದರಿಂದ ಅವರನ್ನು ಸಂದಿಸಲು ಅತ್ಯಂತ ಸಂತೋಷಪಟ್ಟರು. ಹೆರೋದನು ಬೋಧಕರ ಗಂಭೀರವಾದ ರೂಪವನ್ನು ಕಂಡು ಅವರಲ್ಲಿ ನಿಷ್ಕಳಂಕವನ್ನೂ, ಶಾಂತ ಗುಣವನ್ನೂ, ಧಾರಾಳಗುಣವನ್ನು ಕಂಡು, ಇಂತಹ ವ್ಯಕ್ತಿ ಗಲಭೆಗಾರನೆಂದೂ, ದೇಶದ ಸಮಾಧಾನದ ಒಳಿತಿಗೆ ಧಕ್ಕೆ ತರುವ ಮನುಷ್ಯನೆಂದೂ ಅಪರಾಧಿಸಲು ಹೆರೋದನಿಗೆ ಸ್ವಲ್ಪ ಪ್ರಶ್ನೆಯಾಗಿಯೇ ತೋಚಿರಬಹುದು. ಸ್ವಲ್ಪ ಸಮಯದವರೆಗೂ ಯೇಸುವನ್ನು ಮೂದಲಿಸಿ ನಕ್ಕು ಪರಿಹಾಸ್ಯ ಮಾಡಿದನಂತರ, ಯೇಸುವನ್ನು ಅಗೌರವದಿಂದ ನಡೆಸಿದ ಹೆರೋದನಿಂದ, ಅವರ ಅರಮನೆಯ ಸೇವಕರು ಕೂಡ ಅವಕಾಶವನ್ನು ಬಳಸಿಕೊಂಡು ಅವರನ್ನು ಅಪಹಾಸ್ಯಮಾಡಿ ನಕ್ಕರು. ಅವರು ಅವರಿಗೆ ಕೆಂಪು ನಿಲುವಂಗಿಯನ್ನೂ, ಮುಳ್ಳಿನಿಂದ ಹೆಣೆದ ಕಿರೀಟವನ್ನೂ ಧರಿಸಿ, ರಾಜನಂತೆ ಕಾಣದ ಅವರ ರೂಪವನ್ನು ಪರಿಹಾಸ್ಯಮಾಡಿದರು. ಇದಾದ ನಂತರ ಹೆರೋದನು ಅವರ ಪ್ರಕರಣವನ್ನು ವಿಚಾರಿಸಲು ನಿರಾಕರಿಸಿ, ಖೈದಿಯನ್ನು ಪುನಃ ಪಿಲಾತನ ಬಳಿ ಕಳುಹಿಸಿಕೊಟ್ಟನು. ಕೆಲವು ವರ್ಷಗಳ ಹಿಂದೆ ಸ್ನಾನಿಕ ಯೋಹಾನ್ನನನ್ನು ಶಿರಶ್ಛೇದನಗೊಳಿಸಿದ ವಿಷಯದಿಂದ ಉಂಟಾದ ತೊಂದರೆಗಳೇ ತನಗೆ ಸಾಕೆಂದು ಹೆರೋದನು ಎಣಿಸಿದನು. ಖೈದಿಯನ್ನು ಪಿಲಾತನ ಬಳಿ ಆಗಲೇ ಹಿಂತಿರುಗಿ ಕಳುಹಿಸಬೇಕಾಗಿತ್ತು. ಯೇಸುವಿನ ಪ್ರಕರಣವು ಹೆರೋದನಿಗೂ ಪಿಲಾತನಿಗೂ ನಡುವೆ ಒಂದು ಹಾಸ್ಯವಾಗಿ ಕಾಣಲ್ಪಟ್ಟಿತು. ಹೇಗೆಂದರೆ ಯೇಸು ಪರಿಶುದ್ಧರಾಗಿಯೂ, ಅಮಾಯಕರಾಗಿಯೂ, ಹೆರೋದನಿಗೆ ಕಾಣ್ಣುಗಳಿಗೆ ಕಾಣಲ್ಪಡುವಾಗ, ಪ್ರಧಾನಯಾಜಕರು ತುಂಬಾ ಆಪತ್ತಾದವರೂ, ಅವರನ್ನು ಮರಣಧಂಡನೆಗೆ ಒಪ್ಪಿಸಿಕೊಡಬೇಕೆಂದು ಮುಂದಿಟ್ಟ ಈ ಪ್ರಕರಣವನ್ನು ನಡೆಸಿಕೊಡುವುದು ಹೆರೋದನಿಗೆ ಹಾಸ್ಯವಾಗಿ ಕಂಡಿತು, ಅಮಾಯಕರಾದ ಯೇಸು ಪಿಲಾತನ ಬಳಿ ಇದ್ದರೆ ಸುರಕ್ಷಿತರಾಗಿರುವರೆಂದು ಎಣಿಸಿ ಹೆರೋದನು ಪಿಲಾತನ ಬಳಿ ಕಳುಹಿಸಿಕೊಟ್ಟನು.

**ಪಿಲಾತನ ಗೊಡವೆಗಳು ಹೆಚ್ಚಿತು**

ಯೇಸುವನ್ನು ಪುನಃ ಪಿಲಾತನ ಅರಮನೆಗೆ ಕರೆತಂದಾಗ, ಅದು ಪಿಲಾತನಿಗೆ ಮನಸ್ತಾಪವನ್ನು ಉಂಟುಮಾಡಿತು. ಆ ಪ್ರಕರಣವನ್ನು ತೀರಿಸುವುದು ಅಷ್ಟು ಸುಲಭದ ವಿಷಯವಾಗಿರಲಿಲ್ಲ. ಖೈದಿಯ ಬಳಿ ಯಾವ ಅಪರಾಧದ ಸೂಚನೆಗಳು ಇರಲಿಲ್ಲ. ಅವರ ಮೇಲೆ ಅಪರಾಧ ಹೊರಿಸುವವರು ಪಿಲಾತನು ಅಧಿಕಾರಹೊಂದಿದ ಪಟ್ಟಣದಲ್ಲಿರುವ ಬಹುಮುಖ್ಯವಾದ ವ್ಯಕ್ತಿಗಳಂತೆ ಕಾಣಲ್ಪಟ್ಟರು. ಮತಾಧಿಕಾರಿಗಳು ತಮ್ಮ ಒಳ್ಳೆಯ ಉದ್ದೇಶದಿಂದ ಇವುಗಳನ್ನು ಮಾಡುತ್ತಿದ್ದಾರೆ ಎಂದು ತಮ್ಮ ಒಡಂಬಡಿಕೆಯನ್ನು ಸಾಧ್ಯವಾದಷ್ಟು ಕಾಪಾಡಬೇಕು ಮತ್ತು ನೀತಿಯ ವಸ್ತ್ರದ ಕೆಳಗೆ ನಿರಪರಾಧಿಯಾದ ತಮ್ಮ ಖೈದಿಯನ್ನು ಕೊಲ್ಲಬೇಕೆಂದಿದ್ದರು. ಧರ್ಮವನ್ನು ಅವರು ಪಾಲಿಸುವವರಿಂದ ಲೋಕದಲ್ಲಿ ಎಲ್ಲಾ ಕಾಲಸನ್ನಿವೇಶಗಳಲ್ಲೂ ತಪ್ಪಾಗಿ ತೋರಿಸಲ್ಪಡುವುದು ಎಷ್ಟೊಂದು ಚಿಂತಾಜನಕವಾಗಿದೆ ಕಾಣಲ್ಪಡುತ್ತದೆ! ಇಲ್ಲಿ ನಮಗೆ ಒಂದು ಪಾಠವಿದೆ. ಅದೇನೆಂದರೆ ನಾವು ಪಾಪದ ತಪ್ಪುಗಳಲ್ಲಿ ಬೀದ್ದುಹೋಗದಂತೆ ಅಂದರೆ, ಬೇರೆಯವರ ಹಕ್ಕುಗಳನ್ನು ವಿರೋಧಿಸುವ ಮೂಲಕ ದೇವರಿಗೆ ವಿರೋಧವಾಗಿ ನಿಲ್ಲದಂತೆ ನಾವು ನಮ್ಮ ಹೃದಯದ ಉದ್ದೇಶಗಳನ್ನೂ ಯೋಚನೆಗಳನ್ನೂ ಶೋಧಿಸಿ ನೋಡಬೇಕು ಎಂಬುದಾಗಿಯೇ ಇದೆ.

ಪಿಲಾತನು ಅಪರಾಧಗಳನ್ನು ಕೇಳಿಸಿಕೊಂಡನಂತರ ಅವುಗಳಲ್ಲಿ ಯಾವುದೇ ವಿಧವಾದ ಸತ್ಯವೂ ಇಲ್ಲವೆಂದು ತಿಳಿದುಕೊಂಡು, ತನ್ನ ತೀರ್ಮಾನದ ಕುರಿತು ಹೇಳಿದ್ದೇನೆಂದರೆ: "ಯೇಸುವಿನಲ್ಲಿ ನಾನು ಯಾವ ಪಾಪವನ್ನೂ ಕಾಣಲಿಲ್ಲ, ಆದರೆ ಇಲ್ಲಿ ಉಂಟಾಗಿರುವ ಅಸಮಧಾನವನ್ನು ಕಾಣಲು ಇಲ್ಲಿ ಸಮಾಧಾನವನ್ನು ಉಂಟುಮಾಡುವ ಉದ್ದೇಶದಿಂದ, ಇಲ್ಲಿ ಕೂಗಿಕೊಳ್ಳುವ ಜನರ ಅನೀತಿಯಾದ ಕೋರಿಕೆಯನ್ನು ತೃಪ್ತಿಪಡಿಸುವುದು ಅವಶ್ಯವೆಂದು ಎಣಿಸುತ್ತೇನೆ. ಈ ಖೈದಿಯು ಧಂಡನೆಗೆ ಪಾತ್ರನಲ್ಲ ಎಂಬುದನ್ನು ನಾನು ಒಪ್ಪಿಕೊಂಡರೂ ಈ ಖೈದಿಯನ್ನು ಚಾವಟಿಯಿಂದ ಹೊಡೆಯಲು ನಾನು ಅಪ್ಪಣೆಕೊಡುತ್ತೇನೆ. ಈ ಖೈದಿಯ ಒಳಿತನ್ನು ಎಣಿಸಿಯೂ, ಪಟ್ಟಣದ ಸಮಾಧಾನದ ಒಳಿತನ್ನು ಕುರಿತೇ ಈ ಖೈದಿಯನ್ನು ಚಾವಟಿಯಲ್ಲಿ ಹೊಡೆಯಲು ನಾನು ಒಪ್ಪಿಸುತ್ತೇನೆ". ಏಕೆಂದರೆ ಜನರು ತೃಪ್ತಿಪಟ್ಟರೆ ಯೇಸುವಿನ ಜೀವವು ತಪ್ಪಿಸಿಕೊಳ್ಳುತ್ತದೆ. ರಾಜಕೀಯ ತೀರ್ಪುಗಳ ಮಟ್ಟಿಗೆ ಇದು ಅತ್ಯಂತ ನ್ಯಾಯವಾದ ತೀರ್ಪಾಗಿದೆ. ಅಪರಿಪೂರ್ಣ ಸನ್ನಿವೇಶಗಳಲ್ಲಿ ನಿಜವಾದ/ಪೂರ್ಣವಾದ ನ್ಯಾಯ ದೊರಕುವದು ಸಾಧ್ಯವಿಲ್ಲದ ಕೆಲಸವೆಂದು ನ್ಯಾಯಾಲಯದ ನ್ಯಾಯಾಧಿಪತಿಗಳು ಕೂಡ ಒಪ್ಪಿಕೊಳ್ಳುತ್ತಾರೆ.

ಆದರೆ, ಯೇಸುವಿಗೆ ಮರಣಧಂಡನೆಯಲ್ಲದೆ ಬೇರೆ ಯಾವ ಧಂಡನೆಯನ್ನು ಕೊಡಲ್ಪಟ್ಟರೂ, ಅದರಲ್ಲಿ ಮತಾಧಿಕಾರಿಗಳು ತೃಪ್ತಿಗೊಳ್ಳುವುದಿಲ್ಲ. "ಅವರನ್ನು ಶಿಲುಬೆಗೇರಿಸಿರಿ!" "ಅವರನ್ನು ಶಿಲುಬೆಗೇರಿಸಿರಿ!" ಎಂದು ಕೂಗಿಕೊಳ್ಳುವಂತೆ ಜನರ ಗುಂಪಿನವರು ಪ್ರೇರೇಪಿಸಿದರು. ಇಂತಹ ನಿರಪರಾಧಿಯಾದ ಮನುಷ್ಯನಿಗೆ ವಿರೋಧವಾಗಿ ಹೇಗೆ ಹೀಗೊಂದು ದ್ವೇಷವು ಉಂಟಾಯಿತೆಂದು ಅರ್ಥಮಾಡಿಕೊಳ್ಳಲು ಕಠಿಣವಾಗಿತ್ತು. ಆದ್ದರಿಂದಲೇ, "ಏಕೆ, ಏನು ಅಪರಾಧವೆಸಗಿದರು?" ಎಂದು ಪಿಲಾತನು ಪರಿತಾಪಿಸಿದನು. ಆದರೆ "ಅವರನ್ನು ಶಿಲುಬೆಗೇರಿಸಿರಿ" ಎಂಬುದೇ ಉತ್ತರವಾಗಿ ಹಿಂತಿರುಗಿತು. ಅಂದೋ ಪರಿತಾಪ, ಮನುಷ್ಯನ ಉದ್ರೇಕ ಎಷ್ಟಾಗಿ ಅವರ ಕಣ್ಣುಗಳಿಂದ ನೀತಿಯ ಗುರಿ ಎಲ್ಲವನ್ನೂ ಮರೆಮಾಡಿ ಬಿಡುತ್ತದೆ. ಅನಂತರ ಪಿಲಾತನ ಗೊಂದಲವನ್ನು ಇನ್ನೂ ಹೆಚ್ಚಿಸುವ ರೀತಿಯಲ್ಲಿ ಅವನ ಪತ್ನಿ ಯೇಸುವಿನಂತ ಒಬ್ಬ ನೀತಿವಂತನಿಗೆ ಯಾವ ಕೇಡನ್ನೂ ಮಾಡಕೂಡದು ಎಂದೂ, ಯೇಸುವಿನ ವಿಷಯವಾಗಿ ಒಂದು ಭಯಂಕರವಾದ ಕನಸನ್ನು ಕಂಡೆನು ಎಂಬ ವಾರ್ತೆಯನ್ನು  ಕಳುಹಿಸಿದಳು.

ಕಡೆಯ ಪ್ರಯಾಸವಾಗಿ, ಜನರ ಗುಂಪು ಯೇಸುವನ್ನು ನೋಡುವಂತೆ ಯೇಸುವನ್ನು ಒಂದು ಎತ್ತರವಾದ ಸ್ಥಳದಲ್ಲಿ ಪಿಲಾತನು ಕರೆತಂದು ನಿಲ್ಲಿಸಿ, ಅವರನ್ನು ನೋಡಿ, "ಇಗೋ ಈ ಮನುಷ್ಯನು" ಎಂದು ಮಹಾಶಬ್ಧದಿಂದ ಹೇಳಿದನು.. ಅಂದರೆ, " ನೀವು ಶಿಲುಬೆಗೇರಿಸಬೇಕೆಂದು ಬಯಸಿದ ಈ ಮನುಷ್ಯನ ಗುಣಲಕ್ಷಣಗಳನ್ನು ನೋಡಿರಿ, ನಿಮ್ಮ ಜನಾಂಗದಲ್ಲೂ ಸರಿ, ಬೇರೆ ಯಾವ ಜನಾಂಗಗಳಲ್ಲೂ ಸರಿ, ಯಾರ ಬಳಿಯಲ್ಲೂ ಕಾಣಲ್ಪಡದ ರಾಜನಿಗಿರುವ ಎಲ್ಲಾ ಗುಣಲಕ್ಷಣಗಳು ಇವರ ಬಳಿಯಲ್ಲಿ ಅಧಿಕವಾಗಿ ಕಾಣಲ್ಪಡುವದನ್ನು ಸ್ವಲ್ಪ ಗಮನಿಸಿ ನೋಡಿರಿ. ನಿಮ್ಮ ಜನಾಂಗದಲ್ಲೇ ಕಾಣಲ್ಪಡುವ ಅತ್ಯಂತ ಶ್ರೇಷ್ಠ ಗುಣಲಕ್ಷಣಗಳುಳ್ಳ ಇವರನ್ನು ನೀವು ಶಿಲುಬೆಗೇರಿಸುವಿರಾ? ಸ್ವಲ್ಪ ಯೋಚಿಸಿನೋಡಿರಿ. ನ್ಯಾಯವಾಗಿ ನಡೆದುಕೊಳ್ಳಿರಿ. "ಇಗೋ ಈ ಮನುಷ್ಯನು!" ಈ ಒಂದು ಕಾಲಾವಧಿಯಲ್ಲಿ ಆಡಳಿತವು, ವರ್ಷಕೊಮ್ಮೆ ನಿಮಗೊಂದು ಖೈದಿಯನ್ನು ಬಿಡುಗಡೆ ಮಾಡುವದು ನಿಮಗೆ ಕಾಣಲ್ಪಡುವ ವಾಡಿಕೆಯಾಗಿದೆ. ಆದ್ದರಿಂದ, ನೀವು ಈಗ ಯೇಸುವನ್ನು ಒಂದು ಅಪರಾಧಿಯೆಂದು ಎಣಿಸಿಕೊಳ್ಳಿರಿ, ನೀವು ನೀತಿಯೆಂದು ಎಣಿಸಿಕೊಂಡಿರುವ ವಿಷಯಗಳು, ಅವರು ಅಪರಾಧಿ ಎಂದು ಕರೆಯಲ್ಪಡುವ ಮೂಲಕ ತೃಪ್ತಿಗೊಂಡಿತು ಎಂತಲೂ ತಿಳಿದುಕೊಳ್ಳಿರಿ. ಇನ್ನೂ (ಅಪರಾಧಿ ಎಂದು ಕರೆಯಲ್ಪಡುವ) ಯೇಸುವನ್ನು ನಾನು ಈಗ (ವರ್ಷಕ್ಕೊಮ್ಮೆ ಈ ಕಾಲದಲ್ಲಿ ಅಪರಾಧಿಯನ್ನು ಬಿಡುಗಡೆ ಮಾಡುವ ಪ್ರಕಾರ) ಬಿಡುಗಡೆ ಮಾಡುತ್ತೇನೆ" ಎಂದನು. ಆದರೆ, ಜನರಗುಂಪು, "ಅವರನ್ನು ಶಿಲುಬೆಗೇರಿಸಿರಿ!", (ಕಳ್ಳನೂ, ಆಪತ್ತಾದ ನಡವಳಿಕೆಯುಳ್ಳವನೂ ಆದ) ಬರಬ್ಬನನ್ನು ಬಿಡುಗಡೆಮಾಡಿ ಎಂದು ಇನ್ನು ಅಧಿಕವಾಗಿ ಕೂಗಿಕೊಂಡರು.

ಬಿದ್ದುಹೋದ ಮನುಕುಲದ ಜೊತೆ ಸಂಭವಿಸುವ ಈ ವಿನೋಧವಾದ ತಪ್ಪಾದ ನಡತೆಯನ್ನು/ವಿಪತ್ತನ್ನು ಯಾರಿಂದ ವಿವರಿಸಲು ಸಾಧ್ಯ?.. ಅಂದರೆ, ಒಬ್ಬ ಪರಿಶುದ್ಧನಿಗೆ ಬದಲಾಗಿ ಒಬ್ಬ ಕಟುಕನನ್ನು ಆರಿಸಿಕೊಳ್ಳುವ ಕಾರ್ಯವನ್ನು ಯಾರಿಂದ ವಿವರಿಸಲು ಸಾಧ್ಯ? ಕೆಲವು ವರ್ಷಗಳ ಹಿಂದೆ ವಿಯಾಟ್ನಾ ಪಟ್ಟಣದಲ್ಲಿ ಸೆರೆಮನೆಯಲ್ಲಿದ್ದವನೂ ತನ್ನ ದಂಡನೆ ಕಾಲವು ಮುಗಿದನಂತರ ಹೊರಬಂದ ಒಬ್ಬ ಮನುಷ್ಯನು, ಹೊರಬಂದ ಮಾತ್ರಕ್ಕೆ ತನ್ನ ಬಾಷಣವನ್ನು ಪ್ರಾರಂಭಿಸಿದನು. ಅದರಲ್ಲಿ ಎಲ್ಲಾ ಯೂದರೂ ಮರಣಕ್ಕೆ ಒಪ್ಪಿಸಲ್ಪಡಬೇಕು ಎಂದು ಅವನು ಹೇಳಿದನು. ಜನರ ಮಧ್ಯದಲ್ಲಿ ಒಂದು ಉದ್ವೇಕ ಉಂಟಾಯಿತು. ಸೆರೆಯಿಂದ ಹೊರಬಂದ ಆ ಕೆಟ್ಟ ಮನುಷ್ಯನು, ಉಧ್ರಿಕ್ತ ಜನರ ಗುಂಪಿನ ನಾಯಕನಾದನು. ಅವನ ಈ ವೀರ ಮಾತುಗಳ ನಿಮಿತ್ತ ಅವನು ಆ ಪಟ್ಟಣದ ಮಹಾನಗರದ ಒಡೆಯನಾಗಿ ಆರಿಸಲ್ಪಟ್ಟನು. ಅವಮಾನ! ಈ ರೀತಿಯಾದ ವಿಷಯಗಳು ಇತಿಹಾಸದ ಪುಟಗಳಲ್ಲಿ ಬರೆಯಲ್ಪಟ್ಟು, ಇವುಗಳು ನಮಗೂ ಭಯಂಕರವಾಗದ ನೋಟವಾಗಿ ಕಾಣಲ್ಪಡಲು, ಲೋಕವು ಬಿಡುಗಡೆಗೊಳ್ಳುವ ಸ್ಥಿತಿಯನ್ನು ತಲುಪಿಬಿಟ್ಟಿತು ಎಂದು ನಮ್ಮಿಂದೆ ಹೇಗೆ ಹೇಳಲು ಸಾಧ್ಯ. ಲೋಕವು ಬಿಡುಗಡೆ ಪಡೆದುಕೊಳ್ಳುವದಕ್ಕೆ ಬೇಕಾದ ನೆಲೆಯಲ್ಲಿ ಇಲ್ಲದೆ, ಲೋಕಕ್ಕೆ ದೇವರು ಕರುಣಿಸುವೆನು ಎಂದು ಹೇಳಿರುವ ಒಂದು ಬಲವಾದ ಚಕ್ರಾದಿಪತ್ಯದ ಆಡಳಿತವು ಬೇಕಾಗಿರುತ್ತದೆ. ಅಂದರೆ, ಎಲ್ಲಾ ತಪ್ಪುಗಳನ್ನು ಕೆಳಗೆಳೆದು ತಳ್ಳಲು/ವಿಧೇಯಪಡಿಸಲು ಬಲವುಳ್ಳವರಾಗಿ ಕಾಣಲ್ಪಡುವ ದೇವರ ಪ್ರೀತಿಯ ಕುಮಾರನ ರಾಜ್ಯವನ್ನು ಕರುಣಿಸುವೆ ಎಂದು ದೇವರು ಹೇಳುವ ಆಡಳಿತವೇ, ಲೋಕಕ್ಕೆ ಅವಶ್ಯವಾಗಿದೆ.

## ನೀವು ಕೈಸರನಿಗೆ ಸ್ತೇಹಿತನಲ್ಲ

ಯೂದ ಮತಾಧಿಕಾರಿಗಳು ಬಲವನ್ನು ಒಳಗೊಂಡವರಾಗಿ ಕಾಣಲ್ಪಟ್ಟರು. ರೋಮ್ ವಿರುದ್ಧವಾಗಿ ದ್ರೋಹವೆಂಬುದು

ಮಹಾಭಯಂಕರವಾದ ಅಪರಾಧಗಳಲ್ಲಿ ಒಂದು ಎಂಬುದನ್ನು ಅವರು ಚೆನ್ನಾಗಿ ತಿಳಿದುಕೊಂಡಿದ್ದರು. ಇದಲ್ಲದೆ ಯೇಸು ತಮ್ಮನ್ನು ರಾಜನೆಂದು ಪ್ರಕಟಿಸಿರುವ ವಿಷಯವು, ಅವರನ್ನು ಶಿಲುಬೆಗೇರಿಸಲು ಒತ್ತಾಯಿಸಲ್ಪಡುವಂತೆ ಅವರ ಕೈಗಳಲ್ಲಿ ಆಯುಧದಂತೆ ಮಾರ್ಪಟ್ಟಿತು. ಈ ಆಯುಧವನ್ನು ಅವರು ಬಳಸಿಕೊಂಡರು. ಇದಲ್ಲದೆ, ಪಿಲಾತನು ಖೈದಿಯನ್ನು ಬಿಡುಗಡೆ ಮಾಡಿದರೆ ತಾವು ಪಿಲಾತನ ಕುರಿತು ಚಕ್ರವರ್ತಿಯ ಬಳಿ ಹೋಗಿ ದೂರುನೀಡುವುದಾಗಿ ಖಂಡಿಸಿದರು. ಈ ರೀತಿಯಾದ ಕಾರ್ಯಗಳು ರೋಮ್ ಆಡಳಿತದಲ್ಲಿ ವಿವರಿಸುವುದು ಕಠಿಣವಾಗಿರುತ್ತದೆ ಎಂದೂ, ರೋಮ್ ಸರ್ಕಾರವು ತಾವು ಆಡಳಿತ ನಡೆಸುವ ಭಾಗದಲ್ಲಿ ಕಲಹಗಳು ಸಿಡಿಯುವುದನ್ನು ಅನುಮತಿಸುವ ಬದಲು ಒಬ್ಬ ಮನುಷ್ಯನು ಸಾಯುವದು ಒಳ್ಳೆಯದು ಎಂದು ರೋಮ್ ಸರ್ಕಾರವು ಕಾಯಘನ ನಿರ್ಧಾರವನ್ನು ಒಪ್ಪಿಕೊಳ್ಳುತ್ತದೆ ಎಂದೂ, ಪಿಲಾತನು ಚೆನ್ನಾಗಿ ತಿಳಿದಿದ್ದನು. ಈ ರೀತಿಯಾದ ನಿರ್ಭಂದದ ಕೆಳಗೆ ಒತ್ತಾಯಿಸಲ್ಪಟ್ಟ ಪಿಲಾತನು, ಕೊನೆಗೆ ಸಮ್ಮತಿಸಿ ಮರಣಧಂಡನೆಗಾದ ತೀರ್ಪನ್ನು ಬರೆದನು. ಆದರೆ, ಹೀಗೆ ಬರೆಯುವದಕ್ಕೆ ಮುಂಚೆ ಪಿಲಾತನು ನೀರಿರುವ ಒಂದು ಪಾತ್ರೆಯನ್ನು ತರಿಸಿ, "ಈ ನೀತಿವಂತನ ರಕ್ತಕ್ಕೆ ನಾನು ಕಾರಣನಲ್ಲ" ಎಂದು ಹೇಳುತ್ತಾ ಜನರ ಕಣ್ಮುಂದೆ ತನ್ನ ಕೈಗಳನ್ನು ತೊಳೆದುಕೊಂಡನು.

ಧಂಡನೆಯ ತೀರ್ಪನ್ನು ನೆರವೇರಿಸುವ ಕೆಲಸಗಳು ನೆಡೆಯುತ್ತಿದ್ದವು. ಯುದ್ಧಸೈನಿಕರಿಗೆ ಮೊದಲೇ ಇಬ್ಬರು ಕಳ್ಳರನ್ನು ಶಿಲುಬೆಗೇರಿಸಬೇಕಾಗಿದ್ದರಿಂದ, ಈಗ ಇನ್ನೊಂದು ಶಿಲುಬೆಯನ್ನು ಎಣಿಕೆಯಲ್ಲಿ ಸೇರಿಸಿಕೊಂಡರು. ಮೆರವಣಿಗೆ, ತಲೆಬುರುಡೆಯ ಆಕಾರದಲ್ಲಿರುವ ಗೊಲ್ಗಥಾ ಎಂಬ ಬೆಟ್ಟಕ್ಕೆ ಮಾರ್ಗವಾಗಿ ಪಯಣವು ಆರಂಭವಾಯಿತು. ಗೊಲ್ಗಥಾ ಎಂದರೆ ತಲೆಬುರುಡೆ ಎಂಬ ಅರ್ಥವನ್ನು ಕೊಡುತ್ತದೆ. ಅದು ಪಟ್ಟಣದಿಂದ ಉತ್ತರದಿಕ್ಕಿಗೆ ಕೋಟೆಯ ಆಚೆಕಡೆಗೆ ಕಾಣಲ್ಪಡುತ್ತದೆ. ಸಮೀಪದಲ್ಲಿ ಕಟ್ಟಿರುವ ಹೊಸ ಕಟ್ಟಡಗಳೂ, ಕೋಟೆಯೂ, ನೋಡುವವರಿಗೆ ಮುಂದಿದ್ದ ತಲೆಬುರುಡೆಯ ಆಕಾರವನ್ನು ನೋಡಲಾಗದಂತೆ ಆಗಿದೆ. ಕಾನೂನಿನಂತೆ ಪ್ರತಿಯೊಂದು ಅಪರಾಧಿಗಳ ಅಪರಾಧಗಳು ಹಲಗೆಯಲ್ಲಿ ಬರೆಯಲ್ಪಟ್ಟು ಶಿಲುಬೆಯ ಖೈದಿಯ ತಲೆಯಮೇಲೆ ನೇತುಹಾಕಲಾಗಿತ್ತು. ಬೋಧಕರ ತಲೆಯಮೇಲೆ "ಯೇಸು ಯೆಹೂದದ ರಾಜ" ಎಂಬ ಅವರ ಅಪರಾಧವನ್ನು ಬರೆಯಲಾಗಿತ್ತು.

ಸೈತಾನನೂ, ಅವನಿಂದ ವಂಚಿಸಲ್ಪಟ್ಟವರೂ, ಹೇಗೋ ಯೇಸುವನ್ನು ನಿರ್ಮೂಲಮಾಡಿಯಾಯಿತೆಂದು ನೆನೆಸಿಕೊಂಡಿರಬಹುದು ಎಂಬುದು ನಿಶ್ಚಯವೇ. ಯೇಸು ತಮ್ಮನ್ನು ದೇವರ ಕುಮಾರನೆಂದು ಹೇಳಿದ ವಿಷಯಗಳನ್ನು ಕುರಿತು ಯಾಜಕರೂ, ಹಿರಿಯರೂ ಪರಿಹಾಸ್ಯಮಾಡಿದರು. ಇದಲ್ಲದೆ, ಒಂದು ವೇಳೆ ಯೇಸು ನಿಜವಾಗಿಯೂ ದೇವರಪುತ್ರನಾಗಿದ್ದರೆ ಶಿಲುಬೆಯಿಂದ ಕೆಳಗಿಳಿಯುವುದರ ಮೂಲಕ ಅದನ್ನು ನಿರೂಪಿಸು ಎಂತಲೂ ಮಾತನಾಡಿಕೊಂಡರು. ಅವರಿಗೆ ಸತ್ಯವೇನೂ ತಿಳಿದಿರಲಿಲ್ಲ, ಅಂದರೆ, ಯೇಸು ಮಧ್ಯಸ್ತರಾಗಿ ಕಾಣಿಸಿಕೊಳ್ಳುವ ಹೊಸ ಒಡಂಬಡಿಕೆಯ ನಿಭಂದನೆಯ ಕೆಳಗೆ ಸಕಲ ಮನುಕುಲದವರನ್ನು, ಎಲ್ಲವನ್ನೂ ಪೂರ್ಣತೆಗೂ, ಜೀವಕ್ಕೆ ಪುನಃ ಕರೆದುಕೊಂಡು ಬರುವದಕ್ಕಾಗಿ ತಮ್ಮ ಮಹಿಮೆಯಾದ ರಾಜ್ಯದಲ್ಲಿ ಅಧಿಕಾರವನ್ನು ಪಡೆದುಕೊಳ್ಳುವದಕ್ಕೂ ತಾನು ಮನುಷ್ಯರ ಪಾಪಕ್ಕಾಗಿ ಸಾಯಬೇಕು ಎನ್ನುವುದರ ಅವಶ್ಯವನ್ನು ಕುರಿತ ಸತ್ಯವು ಯಾವುದೂ ಅವರಿಗೆ ತಿಳಿಯಲಿಲ್ಲ (ರೋಮರಿಗೆ 31:31). ಆರನೆಯ ಗಂಟೆ ಸಮಯದಲ್ಲಿ ಕಾರ್ತತ್ತಲೆಯು ಮೂರು ಗಂಟೆಯವರೆಗೂ ಭೂಮಿಯನ್ನು ತುಂಬಿಕೊಂಡಿತ್ತು. ಆಗ ಯೇಸು, "ನನ್ನ ದೇವರೇ, ನನ್ನ ದೇವರೇ, ಏಕೆ ನನ್ನನ್ನು ಕೈಬಿಟ್ಟೆ?" ಎಂದು ಕೂಗಿ ಪ್ರಾಣವನ್ನು ಬಿಟ್ಟರು. ಪಾಪಿಗೆ ಸ್ವಂತವಾದ ದೈವೀಕ ನೀತಿಯ ಭಾರವನ್ನು ಯೇಸು ಪೂರ್ತಿಯಾಗಿ ಅನುಭಸಬೇಕಾಗಿದ್ದರಿಂದ, ತಂದೆಯು ಯೇಸುವನ್ನು ಒಂದು ಪಾಪಿಯಂತೆ ಎಣಿಸಿ ತಮ್ಮ ಮುಖವನ್ನು ಅವರಿಗೆ ಮರೆಯಾಗಿಸಲ್ಪಡಬೇಕಾಗಿತ್ತು. ತಂದೆಯ

ಬಳಿಯಿಂದ ಯೇಸುವಿಗೆ ಉಂಟಾದ ಈ ತಾತ್ಕಾಲಿಕ ಅಗಲುವಿಕೆಯು ಬೋಧಕರಿಗೆ ಉಂಟಾದ ಎಲ್ಲಾ ಹೊಡೆತಗಳಲ್ಲೂ ಕಠಿಣವಾದ ಹೊಡೆತವಾಗಿ ಇದ್ದಿರಬಹುದು ಎಂಬುದು ನಿಶ್ಚಯ.